ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಜಾಯಿಕಾಯಿಯ ಶಾಪ

ಪರಿಸರದ ಬಗ್ಗೆ ಪರಿಸರ ವಿಜ್ಞಾನಿಗಳು ಬರೆಯುವುದಕ್ಕಿಂತ ಭಿನ್ನವಾಗಿ ಶಕ್ತವಾಗಿ ಅಮಿತಾವ್ ಬರೆಯುತ್ತಾರೆ. ಒಬ್ಬ ಕಥಾಕಾರನ ಪ್ರಭಾವವಿರುವುದೇ ನಮ್ಮ ಎದುರಿನ ಸವಾಲುಗಳನ್ನು ಮನದಟ್ಟು ಮಾಡುವಂತೆ ಬಿತ್ತರಿಸುವ ಕಲೆಯಲ್ಲಿ.

ಪರಿಸರದ ಬಿಕ್ಕಟ್ಟಿನಲ್ಲಿ ನಮ್ಮ ನಾಡು-ಜಗತ್ತು ಇರುವ ಈ ಸಮಯಕ್ಕೆ ಅಮಿತಾವ್ ಘೋಷ್ ಬರೆದಿರುವ 'ದಿ ನಟ್‌ಮೆಗ್ಸ್ ಕರ್ಸ್' (The Nutmeg's Curse: Parables for a Planet in Crisis) ಪುಸ್ತಕ ಅನೇಕ ಪದರಗಳಲ್ಲಿ ಪರಿಸರವನ್ನು ಮತ್ತು ನಮ್ಮ ಪರಿಸ್ಥಿತಿಯನ್ನು ಅವಲೋಕಿಸುತ್ತದೆ. ಒಬ್ಬ ಸೃಜನಶೀಲ ಬರಹಗಾರ ಪರಿಸರದ ಬಿಕ್ಕಟ್ಟಿನ ಬಗೆಗೆ ಬರೆಯುವಾಗ ಕೇವಲ ವೈಜ್ಞಾನಿಕ ಪರಿಕರಗಳನ್ನು ಉಪಯೋಗಿಸದೇ, ಸಾಹಿತ್ಯ, ಇತಿಹಾಸ ಮತ್ತು ಕಥನಗಳ ಮೂಲಕ ಒಂದು ವ್ಯಾಖ್ಯಾನ ನೀಡುವುದರಲ್ಲಿ ಹೊಸತನ ಮತ್ತು ಭಿನ್ನತೆಯಿದೆ. ಈ ಕಥನದಲ್ಲಿ ಅಮಿತಾವ್ ಅನೇಕ ಸಣ್ಣ ಪುಟ್ಟ ಘಟನೆಗಳು, ಐತಿಹಾಸಿಕ ಪ್ರಸಂಗಗಳನ್ನು ಉಪಯೋಗಿಸುತ್ತಲೇ ಒಂದು ಬಿಕ್ಕಟ್ಟಿನ ಬೃಹತ್ತಾದ ಚಿತ್ರವನ್ನು ಒದಗಿಸಿಕೊಡುತ್ತಾರೆ. ಕೋವಿಡ್ ಕಾಲದಲ್ಲಿ ಒಂಟಿಯಾಗಿ ಪುಸ್ತಕ-ಓದು-ಬರಹದ ನಡುವೆ ತಮ್ಮ ಖಾಸಗಿ ಅನುಭವಗಳನ್ನು ಜಗತ್ತಿನ ಸಮಸ್ಯೆಗಳೊಂದಿಗೆ ತಾಳೆಹಾಕಿ ಆಸಕ್ತಿಕರವಾಗಿ ಕಥನವನ್ನು ಕಟ್ಟುವ ರೀತಿ ಅದ್ಭುತವಾದದ್ದು.

ಜಾಯಿಕಾಯಿ ಮತ್ತು ಜಾಪತ್ರೆಯ ಮೂಲ ಇರುವುದು ಪೂರ್ವ ಇಂಡೊನೇಷ್ಯಾದ ಬಂಡಾ ದ್ವೀಪಗಳಲ್ಲಿ. ಮಸಾಲೆ ವ್ಯಾಪಾರದಲ್ಲಿ ಈ ಎರಡೂ ಮಸಾಲೆಗಳದ್ದು ಪ್ರಮುಖ ಪಾತ್ರವಿತ್ತು. ಹಾಗೂ ಹತ್ತೊಂಬತ್ತನೇ ಶತಮಾನದವರೆಗೂ ಈ ಭೌಗೋಳಿಕ ಪ್ರದೇಶ ಬಿಟ್ಟರೆ ಈ ಎರಡೂ ಮಸಾಲೆಗಳು ಬೇರೆಲ್ಲೂ ಸಿಗುತ್ತಿರಲಿಲ್ಲ. ಮಸಾಲೆ ವ್ಯಾಪಾರದ ಮೇಲಿನ ಅಧಿಪತ್ಯಕ್ಕಾಗಿ ಪೋರ್ಚುಗೀಸರು ಈ ಬಂಡಾ ದ್ವೀಪಕ್ಕೆ ಬಂದದ್ದಲ್ಲದೇ, ಅಲ್ಲಿದ್ದ ಇಡೀ ಜನಸಮುದಾಯವನ್ನು ಸಂಹಾರ ಮಾಡಿದರು. ಅಮಿತಾವ್‌ರ ಪುಸ್ತಕ ಈ ನರಸಂಹಾರದ ಅರ್ಥಹೀನತೆಯಿಂದ ಪ್ರಾರಂಭವಾಗುತ್ತದೆ. ಎಲ್ಲವನ್ನೂ ಆಕ್ರಮಿಸಿ ತಮ್ಮ ಕೈಯಡಿ ಇಟ್ಟುಕೊಳ್ಳಬೇಕೆನ್ನುವ ಅತಿ ಆಸೆ ಮತ್ತು ಸ್ವಾರ್ಥದ ಮೂಲಭೂತ ಮಾನವ ಭಾವನೆಯೊಂದಿಗೆ ಕೈಗೊಳ್ಳುವ ಚರ್ಚೆ ಪರಿಸರ ನಾಶಕ್ಕೆ ಕೊಂಡಿಹಾಕಿಕೊಳ್ಳುವುದನ್ನು ಕಾಣುತ್ತೇವೆ.

ಮೂರು ಶತಮಾನಗಳ ಕಾಲ ಜಾಯಿಕಾಯಿ ಮತ್ತು ಜಾಪತ್ರೆ ಮರಗಳು ಇಂಡೊನೇಷ್ಯಾದ ಈ ದ್ವೀಪಗಳಲ್ಲಿ ಮಾತ್ರ ಬೆಳೆಯುತ್ತಿತ್ತು. ಹೀಗಾಗಿ ಸಣ್ಣ ಜಾಗದಲ್ಲಿ ಉತ್ಪಾದನೆಯಾಗುವ ಈ ಮುಖ್ಯವಾದ ಮಸಾಲೆಯ